O.S. NO. 238/2022
PW - 1.
Dated 19-08-2025

ಸಾಕ್ಷಿಯನ್ನು ಈ ದಿನ ದಿನಾಂಕ 19-08-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ 12 ನೇ ಪ್ರತಿವಾದಿ ಪರವಾಗಿ ಶ್ರೀ ಆರ್ ಎಸ್ ಕೆ ವಕೀಲರಿಂದಃ

ನನ್ನ ಶಿಕ್ಷಣ ಪಿಯು ಸಿ ಪ್ರಥಮ ವರ್ಷ ವರೆಗೆ ಆಗಿರುತ್ತದೆ. ಸಾಕ್ಷಿ ಮುಂದುವರೆದು ನಾನು ಡಿಪ್ಲಮೊ ಇನ್ ಸಿವಿಲ್ ನಪಾಸ ಇರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಪ್ರಾಥಮಿಕ ಶಿಕ್ಷಣ ಕಿತ್ತೂರನಲ್ಲಿ ಆಗಿರುತ್ತದೆ , ಸಾಕ್ಷಿ ಮುಂದುವರೆದು 1 ನೇ ತರಗತಿ ಸಂಗೊಳ್ಳಿಯಲ್ಲಿ ಓದಿ ನಂತರ ಕಿತ್ತೂರನಲ್ಲಿ 2 ನೇ ತರಗತಿಯಿಂದ 8 ನೇ ತರಗತಿ ವರೆಗೆ ಓದಿರುತ್ತೇನೆ. 9 ಮತ್ತು 10 ತರಗತಿಯನ್ನು ನಾನು ನನ್ನ ತಾಯಿಯ ತವರೂರಾದ ಗೊಕಾಕ ತಾಲೂಕಿನ ಅಕ್ಕತಂಗೇರಹಾಳ ಗ್ರಾಮದಲ್ಲಿ ವಾಸವಿದ್ದೆ. ಅಂಕಲಗಿಯಲ್ಲಿ 9 ನೇ ಮತು 10 ನೇ ತರಗತಿ ಓದಿರುತ್ತೇನೆ. ನಾನು ಎಸ್ ಎಸ್ ಎಲ ಸಿ ಮುಗಸಿದ ನಂತರ ಧಾರವಾಡದ ಕೆ ಎಚ್ ಕೆ ಇನೂಸ್ಟೂಟನಲ್ಲಿ ಡಿಪ್ಲಮೊ ಇನ್ ಸಿವಿಲ ಇಂಜನಿಯರನಲ್ಲಿ ಪ್ರವೇಶ ಪಡೆದಿದ್ದೇನೆ.

ನನ್ನ ತಂದೆ ಒಕ್ಕುಲುತನ ಉದ್ಯೋಗ ಮಾಡುತ್ತಿದ್ದರು. ನನ್ನ ತಂದೆ ಸಂಗೊಳ್ಳಿಯಲ್ಲಿ ವಾಸವಿದ್ದರು. ಪ್ರಸ್ತುತ ದಾವೆ ವಾಟ್ನಿ ಕುರಿತು ಹಾಕಿರುತ್ತೇನೆ. ವಾಟ್ನಿ ಹೊರತು ಪಡಿಸಿ ಬೇರೆ ಏನು ಕೇಳಿಲ್ಲ. ನಮ್ಮ ಮನೆತನಕ್ಕೆ ನನ್ನ ಅಜ್ಜನ ಕಾಲದಿಂದ ಇದ್ದ ಜಮಿನು ಮುಳುಗಡೆ ಆಗಿರುತ್ತದೆ ಅದರ ಸರ್ವೆ ನಂಬರ 116 ಇದ್ದೀರಬಹುದು ನಿಖರವಾಗಿ ಗೊತ್ತಿಲ್ಲ. ಸದರಿ

O.S. NO. 238/2022

PW – 1.

Dated 19–08–2025

ಜಮಿನು 1974 ರಲ್ಲಿ ಮುಳುಗಡೆ ಆಗಿರುತ್ತದೆ ಎಂದು ನನ್ನ ತಂದೆ ಹೇಳುತ್ತಿದ್ದರು. ಮುಳುಗಡೆ ಆದ ಜಮಿನು ನನ್ನ ತಂದೆ ಹಿಸ್ಸೆಗೆ 12 ಎಕರೆ ವತ್ತು ನನ್ನ ದೊಡ್ಡಪ್ಪನ ಹಿಸ್ಸೆಗೆ 12 ಎಕರೆ ಇದ್ದ ಜಮಿನು ಮುಳುಗಡೆ ಆಗಿರುತ್ತದೆ. ಸದರಿ ಜಮಿನುಗಳು ಮುಳುಗಡೆ ಆಗಿದ್ದ ಕುರಿತಾದ ದಾಖಲೆಗಳು ನಾನು ನೊಡಿಲ್ಲ . ಅದೇ ರೀತಿ ಮುಳುಗಡೆ ಕುರಿತಾದ ಪರಿಹಾರ ಹಣ ಪಡೆದ ಕುರಿತು ದಾಖಲೆಗಳು ನೊಡಿಲ್ಲ. ನಾನು ಹೆಚ್ಚಾನು ಹೆಚ್ಚು ನನ್ನ ತಾಯಿ ತವರು ಊರಿನಲ್ಲಿ ವಾಸ ಇದ್ದೇನು ಸಂಗೊಳ್ಳಿಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಹೈಸ್ಕೂಲ ಶಿಕ್ಷಣ ಕ್ಕೆ ನಾನು ನನ್ನ ತಾಯಿ ತವರು ಊರನಲ್ಲಿ ಇದ್ದೇನು ಎಂದರೆ ಸಾಕ್ಷಿ 9 ಮತ್ತು 10 ನೇ ತರಗತಿ ಶಿಕ್ಷಣಕ್ಕಾಗಿ ಇದ್ದೇನು ಎಂದು ನುಡಿದಿರುತ್ತಾರೆ. ನಾನು ಹೈಸ್ಕೂಲನಲ್ಲಿ ಓದುತ್ತಿರುವಾಗ ನಮ್ಮ ಕುಟುಂಬದ ಹೊಲ ಮನೆ ವ್ಯವಹಾರದ ಕುರಿತು ನನಗೆ ಗೊತ್ತಿತ್ತು. ನಾನು ನನ್ನ ಹೈಸ್ಕೂಲ ಶಿಕ್ಷಣ ಮುಗಿಸಿದ ನಂತರ ಧಾರವಾಡಕ್ಕೆ ಹೊಗಿದ್ದರಿಂದ ನನಗೆ ಮನೆ ಸಂಪರ್ಕ ಕಡಿಮೆ ಇತ್ತು ಎಂದರೆ ಸರಿ.

ನಮ್ಮ ಮನೆಯಲ್ಲಿ ನನ್ನ ಸಹೊದರರ ಮತ್ತು ಸಹೊದರಿಯರು ಹೀಗೆ ನನ್ನನ್ನು ಸೇರಿ ಒಟ್ಟು 4 ಜನ ಶಾಲೆ ಕಲಿತಿದ್ದೇವೆ. ನನ್ನ ಸಹೊದರ ಮೃತ ಕುಮಾರ ಶಾಲೆ ಕಲಿತಿದ್ದನೊ ಇಲ್ಲವೊ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹೊರತು ಪಡಿಸಿ ಸರ್ವೆ ನಂ 48/2 ಕ್ಷೇತ್ರ 4 ಎಕರೆ 30 ಗುಂಟೆ, ಸರ್ವೆ ನಂ. 48/1 ಅ/1ಬ ಕ್ಷೇತ್ರ 2 ಎಕರೆ ಇರುತ್ತವೆ. ಮನೆ ಮತ್ತು ಖುಲ್ಲಾ ಜಾಗ ಯಾವುದು ಇರುವುದಿಲ್ಲ. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಯಾವುದೇ ಮನೆ

ಆಸ್ತಿ ಬಂದಿಲ್ಲ. ಮುಳುಗಡೆ ಆದ ನಂತರ ಸರ್ಕಾರದವರು ನನ್ನ ತಂದೆಗೆ ಒಂದು ಖಾಲಿ ಪ್ಲಾಟ ಮಂಜೂರು ಮಾಡಿದ್ದರು. ಅದನ್ನು ನನ್ನ ತಂದೆ ಹೇಗೊ ಮಾರಾಟ ಮಾಡಿದ್ದಾರೆ ಅದು ನನ್ನ ಅಣ್ಣನಿಗೆ ಗೊತ್ತಿರುತ್ತದೆ. ಸದರಿ ಖಾಲಿ ಪ್ಲಾಟ ಯಾರಿಗೆ ಯಾರು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ನಾನು ಮೇಲೆ ಹೇಳಿದ ಸರ್ವೆ ನಂ . 48/1 ಅ/1ಬ ಕ್ಷೇತ್ರ 2 ಎಕರೆ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸಾಕ್ಷಿ ಅದನ್ನು ಸೇರಿಸಬಹುದು ಎಂದು ಮುಂದುವರೆದು ನುಡಿದಿರುತ್ತಾರೆ. ಸರ್ವೆ ನಂ . 48/2 ಬಸಪ್ಪ ಮೂಗಪ್ಪ ಕತ್ತಿಯವರಿಂದ ದಿನಾಂಕ 27–12–1976 ರಂದು ಖರೀದಿ ಆದ ಆಸ್ತಿ ಎಂದರೆ ಸರಿ. ಸದರಿ ಆಸ್ತಿ ನನ್ನ ಮತ್ತು ನನ್ನ ಅಣ್ಣ ಕುಮಾರನ ಹೆಸರಿನಲ್ಲಿ ಖರೀದಿ ಆಗಿರುತ್ತದೆ. 1976 ರಲ್ಲಿ ನನ್ನ ವಯಸ್ಸು 10 ವರ್ಷ ಇತ್ತು. ನನ್ನ ಅಣ್ಣ ಕುಮಾರನಿಗೆ ಎಷ್ಟು ವರ್ಷ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮಿನು ನನ್ನ ಹೆಸರಿನಲ್ಲಿ ಖರೀದಿ ಮಾಡಲು ಖರೀದಿ ಹಣ ಎಲ್ಲಿಂದ ತಂದರು ಮತ್ತು ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಯಾರ ಕಡೆಯಿಂದ ಮತ್ತು ಎಷ್ಟು ಎಷ್ಟು ಸಾಲ ಮಾಡಿದ್ದನು ಎಂದು ನನಗೆ ಗೊತ್ತಿಲ್ಲ. ಸದರಿ ಜಮಿನು ಖರೀದಿ ಕಾಲಕ್ಕೆ ಸದರಿ ಹೊಲಕ್ಕೆ ಹೊಗುತ್ತಿದ್ದೇನು. ಸಾಕ್ಷಿ ಮುಂದುವರೆದು ಸದರಿ ಹೊಲದಲ್ಲಿ ಕಬ್ಬಿಗೆ ನೀರು ಹಾಯಿಸುವುದು, ಹತ್ತಿ ಬಿಡಿಸುವುದು , ಶಿಗಿಹುಣ್ಣಿಮೆಗೆ ಪೂಜೆ ಮಾಡಲು ಹೊಗುವುದು ಮಾಡುತ್ತಿದ್ದೇ ಎಂದು ನುಡಿದಿರುತ್ತಾರೆ. ಸದರಿ ಜಮಿನದಿಂದ ಬಂದ ಉತ್ಪನದಲ್ಲಿ ಖರ್ಚು ತೆಗೆದು ಎಷ್ಟು ಲಾಭ ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲ ನನ್ನ

ತಂದೆಗೆ ಗೊತ್ತಿತ್ತು. ನನ್ನ ತಂದೆಗೆ ಸದರಿ ಮೇಲೆ ಹೇಳಿದ 2 ಎಕರೆ ಜಮಿನು ಹೊರತು ಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿ. ಸದರಿ ಜಮಿನದಿಂದ ಬಂದ ಉತ್ಪನ್ನ ನಮ್ಮ ಶಿಕ್ಷಣಕ್ಕೆ ಮತ್ತು ಕುಟುಂಬಕ್ಕೆ ಸಾಕಾಗುತ್ತಿರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಟ್ರಕ ಒಂದು ಖರೀದಿ ಮಾಡಿದ್ದರು ಅದನ್ನು ವಿಪರೀತ ಸಾಲ ಆಗಿ ಸದರಿ ಟ್ರಕ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಈ ಟ್ರಕನ ವಿಷಯ ನನ್ನ ವಾದಪತ್ರದಲ್ಲಿ ಬರೆದು ತೊಂದರೆ ಇರಲಿಲ್ಲ ಎಂದರೆ ಸರಿ.

ನಾನು ಡಿಪ್ಲಮೊ ಇನ್ ಸಿವಿಲ್ 3 ವರ್ಷದ ಕೊರ್ಸ ಇತ್ತು 1986 ರಲ್ಲಿ ಪೇಲಾಗಿ ಅಲ್ಲಿಗೆ ನಾನು 3 ನೇ ವರ್ಷಕ್ಕೆ ಹೊಗಲ್ಲಿಲ್ಲ, ಅಲ್ಲಿಂದ ಮರಳಿ ಬಂದೇನು. ನಾನು ಡಿಪ್ಲಮೊ ಪೇಲ ಆದ ನಂತರ 2-3 ವರ್ಷಗಳ ವರೆಗೆ ಹೊಲ ಮಾಡಿಕೊಂಡು ಊರಿನಲ್ಲಿ ಇದ್ದೇನು. ನಾನು  ಬಿಲ್ಡರ ಹತ್ತಿರ ಲೇಬರಗಳ ಸಂಖ್ಯೆ ಬರೆಯುವ ಸುಪರ ವೈಸರ ಕೆಲಸ ಮಾಡುತ್ತಿದ್ದೆ. ಯಾವ ಬಿಲ್ಡರ ಕಂಪನಿ ಹತ್ತಿರ ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ನಾನು ಖಾಸಗಿ ವ್ಯಕ್ತಿಗಳ ಹತ್ತಿರ ಕೆಲಸ ಮಾಡುತ್ತಿದ್ದೆ ಎಂದು ನುಡಿದಿರುತ್ತಾರೆ .  ನನಗೆ ಸುಪರ ವೈಸರ ಕೆಲಸದಿಂದ ವಾರಕ್ಕೆ ರೂ. 800/- ಕೊಡುತ್ತಿದ್ದರು. ನನ್ನ ಮದುವೆ 2017 ರಲ್ಲಿ ಆಗಿರುತ್ತದೆ. ನನಗೆ ವಾರಕ್ಕೆ ಬರುತ್ತಿದ್ದ 800/- ರೂ ಸಂಬಳ ನನ್ನ ಸ್ವಂತ ಖರ್ಚಿಗೆ ಸಾಕಾಗುತ್ತಿರಲಿಲ್ಲ ಹೀಗಾಗಿ ನನ್ನ ತಂದೆ ಕುಟುಕುಂಬ ನಿರ್ವಹಣೆ ತಾನೆ ಸ್ವತ ಮಾಡುತಿತದ್ದರು ಎಂದರೆ ಸಾಕ್ಷಿ ನನಗೆ ಯಾವುದೇ ದುಶಚಟಗಳು ಇರಲಿಲ್ಲ ಹೀಗಾಗಿ ನನಗೆ ಬರುತ್ತಿದ್ದ ಸಂಬಳ ಮನೆಗೆ

ಕೊಡುತ್ತಿದ್ದೆ ಎಂದು ನುಡಿದಿರುತ್ತಾರೆ. ನನ್ನ ಅಣ್ಣ ಕುಮಾರ ನನ್ನ ತಂದೆ ಜೊತೆ ಒಕ್ಕಲುತನ ಕೆಲಸ ಮಾಡುತ್ತಿದ್ದರು. ಸತತವಾಗಿ ನನ್ನ ಅಣ್ಣ ಕುಮಾರ ಇವರು ನನ್ನ ತಂದೆಯೊಂದಿಗೆ ಒಕ್ಕಲುತನ ಕೆಲಸ ಮಾಡುತ್ತಿದರು ಹೀಗಾಗಿ ಮನೆತನದ ಮತ್ತು ಹೊಲದ ವ್ಯವಹಾರದ ಬಗ್ಗೆ ನನ್ನ ಅಣ್ಣ ಕುಮಾರ ರವರಿಗೆ ಹೆಚ್ಚಿನ ಮಾಹಿತಿ ಇತ್ತು ಎಂದರೆ ನನ್ನ ತಂದೆ ನಂತರ ನನ್ನ ಅಣ್ಣನಿಗೆ ಇತ್ತು ಎಂದು ನುಡಿದಿರುತ್ತಾರೆ. ನನ್ನ ತಂದೆ ಮತ್ತು ನನ್ನ ಅಣ್ಣ ಮನೆತನದ ಯಾವುದೇ ಜವಾಬ್ದಾರಿ ನನಗೆ ಹೊರಿಸುತ್ತಿರಲಿಲ್ಲ ತಾವೇ ಸ್ವತ ನೊಡಿಕೊಳ್ಳುತ್ತಿದ್ದರು ಎಂದರೆ ಸರಿ. ನಮ್ಮ ಕುಟುಂಬದ ಮುಖ್ಯಸ್ಥರು ನನ್ನ ತಂದೆ ಮತ್ತು ನನ್ನ ಅಣ್ಣ ಕುಮಾರ ಅವರೇ ಕುಟುಂಬದ ಜವಾಬ್ದಾರಿ ನೊಡಿಕೊಳ್ಳುತ್ತಿದ್ದರು ಎಂದರೆ ಸರಿ.

ನನ್ನ ತಂದೆ ತನ್ನ ಜೀವಿತ ಅವದಿಯಲ್ಲಿ ಇದ್ದಾಗ ಮನೆತನದ ಅಡಚಣೆಗೊಸ್ಕರ ಕೈಗಡ ಸಾಲ ಮಾಡಿದ್ದರಿಂದ ಸದರಿ ಸಾಲ ತಿರುವಳಿ ಮಾಡುವ ಜವಾಬ್ದಾರಿ ಅವರ ಮೇಲೆ ಇತ್ತು ಎಂದರೆ ಸರಿ. ನನ್ನ ತಂದೆಗೆ ಹೊಲದಿಂದ ಸಾಕಷ್ಟು ಆದಾಯ ಇರಲಿಲ್ಲ ಮತ್ತು ಸದರಿ ಜಮಿನು ಹೊರತು ಪಡಿಸಿ ಬೇರೆ ಆದಾಯ ಮೂಲ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಕುಮಾರ ದುಂದು ವೆಚ್ಚ ಮಾಡುತ್ತಿದ್ದರು ಹೀಗಾಗಿ ಕುಟುಂಬಕ್ಕೆ ಸಾಲ ಆಗಿತ್ತು ಎಂದು ಸ್ವತ ನುಡಿದಿರುತ್ತಾರೆ.

ನಾನು ದುಡಿಯಲು ಬೆಂಗಳೂರಗೆ ಹೊಗಿದ್ದೆ ಮತ್ತು ಅಲ್ಲೆ ವಾಸವಿದ್ದೆ ಎಂದು

ತೋರಿಸಲು ದಾಖಲೆ ಇದೆಯಾ ಎಂದರೆ ಹೊಗಿ ಬಂದು ಮಾಡುತ್ತಿದ್ದೆ ಎಂದು ನುಡಿದಿರುತ್ತಾರೆ. ನಾನು ಅಂದಾಜು 1990 ರಿಂದ ಬೆಂಗಳೂರಗೆ ದುಡಿಯಲು ಹೊಗಿ ಬಂದು ಮಾಡುತ್ತಿದ್ದೇನು. ನಾನು ಬೆಂಗಳೂರನಲ್ಲಿ ಯಾರ ಹತ್ತಿರ ಕೆಲಸ ಮಾಡುತ್ತಿದ್ದೆ ಮತ್ತು ನನ್ನ ಸಂಬಳ ಎಷ್ಟು ಬರುತ್ತಿತ್ತು ಎಂದು ತೊರಿಸುವ ದಾಖಲೆ ಹಾಜರು ಮಾಡಿರುವುದಿಲ್ಲ.

ನನ್ನ ತಂದೆ ಯಾವ ಯಾವ ಆಸ್ತಿ ಮಾರಾಟ ಮಾಡಿರುತ್ತಾರೆ ಎಂದು ನನಗೆ ಮಾಹಿತಿ ಇರುತ್ತದೆ. ಅವರು ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಿದರು ಎಂದರೆ ಸಾಕ್ಷಿ ನಮಗೆ ಗೊತ್ತಿಲ್ಲದೇ ಮಾರಾಟ ಮಾಡಿದ್ದಾರೆ ಎಂದು ನುಡಿದಿರುತ್ತಾರೆ. ನಾನು ಸಂಗೊಳ್ಳಿ ಯಲ್ಲಿ ವಾಸವಿದ್ದೆ ಎಂದು ತೊರಿಸಲು ಬ್ಯಾಂಕ ಪಾಸ ಪುಸ್ತಕ ಇರುತ್ತದೆ. ರೇಶನ ಕಾರ್ಡ ಮತ್ತು ಆಧಾರ ಕಾರ್ಡ ಇರುವುದಿಲ್ಲ. ನಾನು ಹೊಲಕ್ಕೆ ಹೊಗುತ್ತಿದ್ದಾಗ ಖರ್ಚು ವೆಚ್ಚಗಳು ಎಷ್ಟು ಆಗಿವೆ ಎಂದು ನನ್ನ ತಂದೆಗೆ ಲೆಕ್ಕ ಕೇಳುತ್ತಿರಲಿಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಸಾಲ ಮಾಡಿದ್ದನು ಅವರು ಹೇಗೆ ತಿರುವಳಿ ಮಾಡಿದ್ದಾರೆ ಎಂದರೆ ನಾನು ಸಹ ಸಹಾಯ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಬ್ಯಾಂಕನಲ್ಲಿ ಸಾಲ ಇತ್ತು ಎಂದರೆ ಸರಿಯಲ್ಲ. ಕೈಗಡ ಸಾಲ ಇತ್ತು ಅವು ಬಹಳ ಇರಲಿಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಕುಟುಂಬದ ಅಡಚಣೆ ಗೊಸ್ಕರ ಮತ್ತು ಕೈಗಡ ಸಾಲ ತಿರುವಳಿ ಮಾಡುವ ಗೊಸ್ಕರ ಸರ್ವೆ ನಂ. 48/2 ಕ್ಷೇತ್ರ 8 ಎಕರೆ 30 ಗುಂಟೆ ಪೈಕಿ 2 ಎಕರೆ ಜಮಿನು ಮಾರಾಟಕ್ಕೆ ಹಚ್ಚಿದ್ದರು

ಎಂದರೆ ಸರಿ. ಸದರಿ ಜಮಿನು ಮಾರಾಟಕ್ಕೆ ಹಚ್ಚಿದಾಗ ನನ್ನ ವಯಸ್ಸು 18 ವರ್ಷ ಮೇಲ್ಪಟ್ಟ ಇತ್ತು ಎಂದರೆ ಸರಿ. ಸದರಿ ಜಮಿನು ಖರೀದಿ ಮಾಡಲು ನಾಗಪ್ಪ ಗಣಾಚಾರಿ ರವರು ನನ್ನ ತಂದೆ ಮತ್ತು ನನ್ನ ಅಣ್ಣನ ಜೊತೆ ಮಾತು ಕತೆ ಮಾಡಿ ಆಗಿನ ಕಾಲಕ್ಕೆ ರೂ. 51 ಸಾವಿರಕ್ಕೆ ಖರೀದಿ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಸದರಿ ಮಾರಾಟ ಹಣಕ್ಕೆ ಒಪ್ಪಿ ದಿನಾಂಕ 27-04-1993 ರಂದು ನೊಂದಾಯಿತ ದಾಖಲೆ ಮೂಲಕ ಸದರಿ ಜಮಿನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ 8 ಎಕರೆ 30 ಗುಂಟೆ ಪೈಕಿ 2 ಎಕರೆ ಜಮಿನು ನಾಗಪ್ಪ ಗಣಾಚಾರಿರವರು ಖರೀದಿ ಪ್ರಕಾರ ಪ್ರತ್ಯೇಕ ಕಬ್ಜಾ ವಹಿವಾಟು ಮಾಡುತ್ತಾ ಬರುತ್ತಿದ್ದರು ಎಂದರೆ ಸರಿ. ಸದರಿ ಮಾರಾಟ ಆದ ನಂತರ ನಾನು ನನ್ನ ತಂದೆಗೆ ಮಾರಟ ಕುರಿತು ಕೇಳಿದ್ದೀರಾ ಎಂದರೆ ಸಾಕ್ಷಿ ನಾಗಪ್ಪ ಗಣಾಚಾರಿ ರವರು ಮೊದಲಿನಿಂದ ನಮ್ಮ ಜಮಿನು ಸಾಗುವಳಿ ಮಾಡುತ್ತಾ ಬರುತ್ತಿದ್ದರು ನಾವು ಹೊಲಕ್ಕೆ ಹೊದಾಗ ಅವರೇ ಜಮಿನು ಸಾಗುವಳಿ ಮಾಡುತ್ತಿದ್ದುದ್ದನು ನೊಡಿ ಅವರೇ ಸಾಗುವಳಿದಾರ ಅಂತಾ ತಿಳಿದುಕೊಂಡು ನಮ್ಮ ತಂದೆಗೆ ಮಾರಾಟದ ವಿಷಯ ಕೇಳಲುಹೊಗಿಲ್ಲ ಎಂದು ನುಡಿದಿರುತ್ತಾರೆ. ನಮ್ಮ ತಂದೆ ಮತ್ತು ಅಣ್ಣ ಸೇರಿ ನಮ್ಮ ಮನೆತನದ ಆರ್ಥಿಕ ಅಡಚಣೆಗೊಸ್ಕರ ನಾಗಪ್ಪ ಗಣಾಚಾರಿ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1993 ರಲ್ಲಿ ನಮ್ಮ ಕುಟುಂಬಕ್ಕೆ ಇದ್ದ ಸಾಲ ತಿರವಳಿ ಮಾಡಲು ಯಾವುದೇ ಆದಾಯ ಇಲ್ಲದೇ ಇದ್ದುದರಿಂದ ಮೇಲೇ ಹೇಳಿದ 2 ಎಕರೆ ಜಮಿನು ನನ್ನ ತಂದೆ ಮತ್ತು ನನ್ನ ಅಣ್ಣ ಸೇರಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾಗಪ್ಪ

O.S. NO. 238/2022
PW - 1.
Dated 19-08-2025

ಗಣಾಚಾರಿರವರಿಗೆ ನನ್ನ ತಂದೆ ಮತ್ತು ಅಣ್ಣ ಜಮಿನು ಮಾರಾಟ ಮಾಡಿರುವ ವಿಷಯ 2005 ನೇ ಸಾಲಿನಲ್ಲಿ ನನಗೆ ಗೊತ್ತಾಗಿರುತ್ತದೆ. 2005 ರಲ್ಲಿ ನನಗೆ ಜಮಿನು ಮಾರಾಟ ವಿಷಯ ಗೊತ್ತಾದ ನಂತರ ಖರೀದಿ ಪತ್ರದ ಪ್ರತಿಯನ್ನು ಪಡೆದು ನಾನು ಖರೀದಿ ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾವೆ ವಗೈರೆ ಸಲ್ಲಿಸಿರುವುದಿಲ್ಲ. ನನ್ನ ತಂದೆ ಮತ್ತು ಅಣ್ಣ ಮಾಡಿರುವ ಸಾಲ ನಾನು ತಿಳಿಸಿದ್ದೇನೆ ಎನ್ನುವುದಕ್ಕೆ ಯಾವುದಾದರು ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದ ನುಡಿದಿರುತ್ತಾರೆ. ನನ್ನ ತಂದೆ ಮತ್ತು ಅಣ್ಣ ನಮ್ಮ ಕುಟುಂಬದ ಹಿತಾಸ್ತಿಗೊಸ್ಕರ ಸಾಲ ಮಾಡಿರುತ್ತಾರೆ ಹೊರತು ಅವರ ವಯಕ್ತಿಕ ದುಶಚಟಗಳಿಗೆ ಮಾಡಿರುವುದ್ಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅವರು ಮಾಡಿದ ಸಾಲದಿಂದ ನಮ್ಮ ಮನೆತನಕ್ಕೆ ಯಾವುದೇ ಉಪಯೊಗ ಆಗಿಲ್ಲ ಎಂದು ಸ್ವತ ನುಡಿದಿರುತ್ತಾರೆ. ನನ್ನ ತಂದೆ ಮತ್ತು ಅಣ್ಣ ಸೇರಿ ನಮ್ಮ ಕುಟುಂಬದ ಅಡಚಣೆ ಗೊಸ್ಕರ ಮಾರಾಟ ಮಾಡಿದ ಜಮಿನಿನ ಮಾರಾಟ ಪತ್ರವು ನನಗೆ ಬಂದನಕಾರಿ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಸಾಲದಲ್ಲಿ ಸಹ ನನಗೆ ತಿರುವಳಿ ಮಾಡುವ ಸಮಾನ ಹೊಣೆಗಾರಿಕೆ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಅಣ್ಣ ಕುಟುಂಬದ ಹಿತಾಸಕ್ತಿಗೊಸ್ಕರ ಮಾಡಿರುವ ಸಾಲದಲ್ಲಿ ನನ್ನದು ಸಹ ಸಮಾನ ಹೊಣೆಗಾರಿಕೆ ಇದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾಗಪ್ಪ ಗಣಾಚಾರಿ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ನನಗೆ ಮಾಹಿತಿ

ಇರುವುದಿಲ್ಲ. ಆದರೆ ಒಬ್ಬನು ಹೊಲಕ್ಕೆ ಬರುತ್ತಿದ್ದು ಆತನ ಹೆಸರು ಮಲ್ಲಪ್ಪ ಇರುತ್ತದೆ ಎಂದು ನುಡಿದಿರುತ್ತಾರೆ. ನಾಗಪ್ಪ ಗಣಾಚಾರಿ ರವರ ಹೆಂಡತಿ ಪೊಟಗಿದಾವೆ ಹಾಕಿದ್ದಳು ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮಿನ ಉತಾರವನ್ನು ತೆಗೆಸಿ ನೋಡಿರುತ್ತೇನೆ. ಅದರಲ್ಲಿ ನಾಗಪ್ಪನ ವಾರಸಾದಾರ ಒಬ್ಬನೇ ಮಲ್ಲಪ್ಪ ಅಂತಾ ಇರುತ್ತಾರೆ. 1993 ರಲ್ಲಿ ಜಮಿನು ಮಾರಾಟ ಮಾಡಿರುವ ವಿಷಯ ನನ್ನನು ಸೇರಿ ನನ್ನ ಸಹೋದರ ಸಹೋದರಿಯರಿಗೆ ಗೊತ್ತಿರುವುದರಿಂದ ಸದರಿ ಮಾರಾಟ ಪ್ರಶ್ನಿಸಿ ನಾವು ಎಲ್ಲಿಯೂ ದಾವೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಸೇರಿ ನನ್ನ ಖೊಟ್ಟಿ ಮರಣ ಪ್ರಮಾಣ ಪತ್ರ ಸೃಷ್ಟಿಸಿದ್ದಾರೆ ಎಂದು ಅವರ ಮೇಲೆ ಕ್ರಮ ಕೈಗೊಳ್ಳುವಂತೆ ದೂರು ವಗೈರೆ ಕೊಟ್ಟಿರುವುದಿಲ್ಲ. ನನ್ನ ಮರಣ ಪ್ರಮಾಣ ಪತ್ರ ಖೊಟ್ಟಿ ಸೃಷ್ಟಿಸಿದ್ದಾರೆ ಎಂದು 2006 ರಲ್ಲಿ ಗೊತ್ತಾಗಿರುತ್ತದೆ. ನಾನು ನನ್ನ ಮರಣ ಪ್ರಮಾಣ ಪತ್ರ ಖೊಟ್ಟಿ ಸೃಷ್ಟಿಸಲಾಗಿದೆ ಎಂದು ಸಂಬಂದಪಟ್ಟ ಅಧಿಕಾರಿಗಳ ಮೇಲೆ ದೂರು ವಗೈರೆ ಕೊಟ್ಟಿಲ್ಲ. ಖೊಟ್ಟಿ ಸೃಷ್ಟಿಸಿದ ನನ್ನ ಮರಣ ಪ್ರಮಾಣ ಪತ್ರ ಪ್ರಸ್ತುತ ದಾವೆಯಲ್ಲಿ ಹಾಜರು ಮಾಡಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ - 36 ನ್ನು 2006-2007 ನೇ ಸಾಲಿನಲ್ಲಿ ಪಡೆದಿರುತ್ತೇನೆ. ನಾನು ಹಾಜರುಪಡಿಸಿದ ನಿಪಿ - 36 ರಲ್ಲಿ ನಾನು ಮರಣ ಹೊಂದಿರುತ್ತೇನೆ ಎಂದು ಎಲ್ಲಿಯೂ ಉಲ್ಲೇಖಿಸಿರುವುದಿಲ್ಲ ಎಂದರೆ ಸರಿಯಲ್ಲ. ಮಾರಾಟದ ವಿಷಯ ನನಗೆ ಮತ್ತು ಉಳಿದ ಪ್ರತಿವಾದಿಗಳಿಗೆ ಮೊದಲಿಂದಲೂ

O.S. NO. 238/2022
PW - 1.
Dated 19-08-2025

ಗೊತ್ತಿದ್ದರು ಸಹ 12 ಮತ್ತು 13 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಬೇಕುಂಬ ಉದ್ದೇಶದಿಂದ ಖೊಟ್ಟಿ ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ನಾಗಪ್ಪ ಗಣಾಚಾರಿ ರವರಿಗೆ ಮಾರಾಟ ಪತ್ರವು ನನಗೆ ಮತ್ತು ಉಳಿದ ಪ್ರತಿವಾದಿಗಳಿಗೆ ಬಂದನಕಾರಕ ಇರುತ್ತದೆ ಎಂದರೆ ಸರಿಯಲ್ಲ. 12 ನೇ ಪ್ರತಿವಾದಿ ತಂದೆ ಜಮಿನು ಖರೀದಿ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ನಾನು ಮನೆಯಲ್ಲಿ ಹೆಚ್ಚು ವಾಸ ಮಾಡದೇ ಇದ್ದುದರಿಂದ ನನ್ನ ತಂದೆ ಮತ್ತು ಸಹೊದರ ರರೊಂದಿಗೆ ಸಂಪರ್ಕ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ನನ್ನ ಅಣ್ಣ ಜಿವಿತ ಇರುವಾಗ ಸುಮ್ಮನಿದ್ದು ಅವರು ಮೃತಪಟ್ಟನಂತರ ಕುಟುಂಬದ ಸಾಲ ಇರಲಿಲ್ಲ ಅಂತಾ ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ 13 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು .

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.